ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮೊದಲು ಡಿಸ್ಟ್ರಿಕ್ಟ್ ಬೋರ್ಡ್, ಮುನಿಸಿಪಾಲಿಟಿ, ಮತ್ತು ಸರ್ಕಾರ ಈ ಮೂರು ಜನರೂ ಸೇರಿ ಕಾನೆ ಈ ಮುನಿಸಿಪಲ್ ಹೌಸ್ಗಳು ಪ್ರಾರಂಭ ಮಾಡಿದ್ದು ?

Sri A. G. RAMACHANDRA RAO.—I want notice.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡಿಸ್ಟ್ರಿಕ್ಟ್ ಬೋರ್ಡಿನವರು ಅವರ ಕೋಟಾ ಕೊಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಕೋಟಾ ಕೊಡದೇ ಇರುವುದರಿಂದ ಮುನಿಸಿಪಾಲಿಟಿಯವರೇ 15 ಸಾವಿರ ರೂಪಾಯಿಗಳವರೆಗೂ ವರ್ಷಕ್ಕೆ ಕೊಡಬೇಕಾಗಿ ಬಂದು ಬಹಳ ಕಷ್ಟವಾಗಿದೆ. ಆದ್ದರಿಂದ ಇದನ್ನು ಮುನಿಸಿಪಾಲಿಟಿಯ ಆಡಳಿತದಿಂದ ತಪ್ಪಿಸಬೇಕೆಂದು ಹೇಳುತ್ತಿದ್ದೇನೆ. ಅದು ಸಾಧ್ಯವಾಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಿಲ್ಲ.

Minor Tanks in Hassan District (repairs).

Q.–19. Sri B. N. BORANNA GOWDA (Belur).—

Will the Government be pleased to state :—

(*a*) the number of minor tanks repaired during this year out of the grant given by the Government to Hassan District ;

(*b*) out of the grant, how much money had been spent for completion of tanks under the head : (*i*) Sluice repairs, (*ii*) Desilting, and (*iii*) Restoration ;

(*c*) the number of projects prepared for this year ; the number of projects under execution ?

A.—Sri Kadidal MANJAPPA (Minister for Revenue and Public Works).—

(*a*) 28.

(*b*)

(i) Sluice repairs	...	Rs. 23,886
(ii) Desilting	...	Nil
(iii) Restoration	...	Rs. 18,422

(*c*) Restoration projects for 91 tanks have been prepared during this year. 158 restoration works are in progress, out of which 100 are incomplete works of last year and 58 are fresh works of this year.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹೂಳು ತೆಗೆಯುವುದಕ್ಕೆ ಹಣವನ್ನು ಒದಗಿಸಿಲ್ಲ; ಕಾರಣವೇನು, ಸ್ವಾಮಿ?

*ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡಿನಲ್ಲಿ ಸ್ವಲ್ಪ ಕಷ್ಟ, ಲೇಬರ್ ಸಿಕ್ಕುವುದಿಲ್ಲ. ಡೀಸಿಲ್ಟಿಂಗ್ ಲಾಭದಾಯಕವಾಗಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಮಲೆನಾಡಿನಲ್ಲಿ ಕೆರೆಗಳು ಬಹುಮಟ್ಟಿಗೆ ಹೊಳಿನಿಂದ ತುಂಬಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ. ಆದರೆ ಡೀಸಿಲ್ಟಿಂಗ್ ಮಾಡುವುದಕ್ಕೆ ಲಕ್ಷಗಟ್ಟಲೆ ಹಣಬೇಕು. ಅಲ್ಲದೆ ವರ್ಷದ ಬಹುಭಾಗದಲ್ಲಿ, ಮಳೆ ಬೀಳುತ್ತ ಇರುವುದರಿಂದ ಡೀಸಿಲ್ಟಿಂಗ್ ಮಾಡಲು ಕಾಲ ಬಹಳ ಕಡಿಮೆ ಇರುತ್ತದೆ. ಇರುವಷ್ಟು ಕಾಲದಲ್ಲಿ ಮಾಡಬೇಕೆಂದರೆ ಆ ಕಾಲಕ್ಕೆ ಸರಿಯಾಗಿ ಕೂಲಿ ಸಿಕ್ಕಬೇಕು, ಎಸ್ಟಿಮೇಟು ತಯಾರಾಗಬೇಕು, ಕಂಟ್ರಾಕ್ಟರು ಸಿಕ್ಕಬೇಕು—ಇದೆಲ್ಲಾ ಇದೆ.

Tanks breached in Visvesvaraya Canal Area (restoration).

Q.—56. Sri B. P. NAGARAJA MURTHY (Malavalli).—

Will the Government be pleased to state :—

(*a*) the number of tanks breached by them in the Visvesvaraya Canal area on health grounds ;

(*b*) the total amount spent for breaching those tanks ;

(*c*) whether they have proposed to restore those tanks ;

(*d*) if so, in how many cases they have taken decision to restore the breached tanks and which are those tanks ;

(*e*) what the estimate of restoration of each tank is, where the Government have proposed or taken decision to restore ?

A.—Sri Kadidal MANJAPPA (Minister for Revenue and Public Works).—

(*a*) 125. 117 tanks breached or fully depleted.
8 partially depleted.

125

(*b*) About Rs. 10 lakhs.

(*c*) As an experimental measure, it is proposed to take up the restoration of depleted tanks in one or two valleys in the first instance.

(*d*) The tanks to be actually taken up in accordance with the decision, [*vide* (*c*)] have not yet been named.

(*e*) Does not arise in view of reply to (*d*).